# ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಾರ್ಯಾಲಯ, ಬಾಗಲಕೋಟ

ಸಂಖ್ಯೆ: 5860/ರೆ.ಕ್ರಾ.ಸಂ.ಸ್ಥಾ.ಡಿಡಿ/ಚೆಕ್. ಸ.ಕು/ /2020-21 ದಿನಾಂಕ: 22/12/2020

"ಅತೀ ತುರ್ತು"

-:ಜ್ಞಾಪನ:-

ವಿಷಯ: ರಾಜ್ಯದ ಎಲ್ಲ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢ ಶಾಲೆಗಳಲ್ಲಿ ಕಿರಿಯ ರೆಡ್ ಕ್ರಾಸ್ ಸಂಸ್ಥೆಗಳನ್ನು ಸ್ಥಾಪಿಸುವ ಕುರಿತು

ಉಲ್ಲೇಖ:1) ಮಾನ್ಯ ನಿರ್ದೇಕರು (ಪ್ರೌಢ ಶಿಕ್ಷಣ) ಆಯುಕ್ತರ ಬೆಂಗಳೂರು ಅವರ ಪತ್ರ ಸಂ: ಸಿ4/(6)ಸ.ಪ್ರೌ.ಶಾ.ರೆಡ್ ಕ್ರಾಸ್ 94/2012-13, ದಿನಾಂಕ:23-06-2020

2)ರಾಜ್ಯ ಮನ್ವಯಾಧಿಕಾರಿ, ಭಾರತೀಯ ರೆಡ್ ಕ್ರಾ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇವರ ಪತ್ರ ಸಂ: ದಿನಾಂಕ:14-09-2020 ಮತ್ತು 22/12/2020

3)ಈ ಕಚೇರಿ ಪತ್ರ ಸಮ ಸಂಖ್ಯೆ ದಿಆಂಕ:25-09-2020

*****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖ(01) & (02)ರ ಪತ್ರದೊಂದಿಗೆ ತಿಳಿಸಿದಂತೆ ಪ್ರೌಢ ಶಾಲೆಗಳಲ್ಲಿ ಕಿರಿಯ ರೆಡ್ ಕ್ರಾಸ್ ಶಾಖೆಗಳನ್ನು ಪ್ರಾರಂಭಿಸುವ ಸಲುವಾಗಿ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢ ಶಾಲೆಗಳಲ್ಲಿ ವಾರ್ಷಿಕವಾಗಿ ಶಾಲಾ ಸದಸ್ಯತ್ವದ ಶುಲ್ಕ ರೂ. 100/- ಗಳನ್ನು ಪಾವತಿಸಿ ನೊಂದಾಯಿಸಿಕೊಳ್ಳುವುದು ಹಾಗೂ ಪ್ರೌಢ ಶಾಲೆಗಳ (8 ರಿಂದ 10ನೇ ತರಗತಿ ವಿದ್ಯಾರ್ಥಿಗಳು) ರೂ. 10/- ಗಳನ್ನು ಪ್ರತಿ ವಿದ್ಯಾರ್ಥಿಗಳಿಂದ ಪಡೆದು ಅದರಲ್ಲಿ ರೂ. 6/- ಗಳನ್ನು ಕಿರಿಯ ರೆಡ್ ಕ್ರಾಸ್ ಚಟುವಟಿಕೆಗಳಿಗೆ ಹಾಗೂ ರೂ. 4/- ಗಳ್ನು ಕಿರಿಯ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕಾರ್ಯಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳುವಂತೆ ಸರ್ಕಾರದ ಆದೇಶದಲ್ಲಿ ಅನುಮತಿ ನೀಡಿರುವುದಾಗಿ ತಿಳಿಸಿರುತ್ತಾರೆ.

ಉಲ್ಲೇಖಿತ ಪತ್ರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ, ಜಿಲ್ಲೆಯ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢ ಶಾಲೆಗಳಲ್ಲಿ ಕಿರಿಯ ರೆಡ್ ಕ್ರಾಸ್ ಶಾಖೆಗಳನ್ನು ಪ್ರಾರಂಭಿಸಿ, ವಾರ್ಷಿಕವಾಗಿ ಶಾಲಾ ಸದಸ್ಯತ್ವ ಶುಲ್ಕ ರೂ. 100/- ಗಳನ್ನು ಪಾವತಿಸಿ ನೊಂದಾಯಿಸಿಕೊಳ್ಳುವುದು ಮತ್ತು ಪ್ರೌಢ ಶಾಲೆಗಳ (8 ರಿಂದ 10ನೇ ತರಗತಿ ವಿದ್ಯಾರ್ಥಿಗಳು) ರೂ. 10/-ಗಳನ್ನು ಪ್ರತಿ ವಿದ್ಯಾರ್ಥಿಗಳಿಂದ ಪಡೆದು ಅದರಲ್ಲಿ ರೂ. 6/-ಗಳನ್ನು ಕಿರಿಯ ರೆಡ್ ಕ್ರಾಸ್ ಚಟುವಟಿಕೆಗಳಿಗೆ ಹಾಗೂ ರೂ. 4/- ಗಳನ್ನು ಡಿ ಡಿ/ಚೆಕ್ ಮೂಲಕ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ನಂ. 26, ರೆಡ್ ಕ್ರಾಸ್ ಭವನ, ಮೊದಲನೇ ಮಹಡಿ, ರೆಸ್ ಕೋರ್ಸ್ ರೋಡ್, ಬೆಂಗಳೂರು- 560 001 ಗೆ ಕಳುಹಿಸಲು ಶಾಲಾ ಮುಖ್ಯ ಶಿಕ್ಷಕರಿಗೆ ಸೂಚಿಸಿಲು ತಿಳಿಸಿದೆ.

ಉಲ್ಲೇಖ (03)ರ ಪತ್ರದೊಂದಿಗೆ ಜಿಲ್ಲೆಯ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢ ಶಾಲೆಗಳಲ್ಲಿ ಕಿರಿಯ ರೆಡ್ ಕ್ರಾಸ್ ಶಾಖೆಗಳನ್ನು ಪ್ರಾರಂಭಿಸಿ ಶಾಲಾ ವಾರ್ಷಿಕವಾಗಿ ಶಾಲಾ ಸದಸ್ಯತ್ವ ಶುಲ್ಕ ರೂ. 100/- ಗಳನ್ನು ಪಾವತಿಸಿ ನೊಂದಾಯಿಸಿಕೊಳ್ಳಲು ಸೂಚಿಸಲಾಗಿತ್ತ, ಆದರೆ ಇದುವರೆಗೂ ಯಾವುದೇ ಶಾಲೆಗಳು ನೊಂದಣಿಯಾಗಿರುವುದಿಲ್ಲ ಎಂದು ತಿಳಿಸಿರುವರು. ಈ ಪತ್ರ ತಲುಪಿದ ಕೂಡಲೇ ನಿಮ್ಮ ಹಂತದಲ್ಲಿ ಸೂಕ್ತ ಕ್ರಮಕೈಗೊಂಡು ಒಂದು ವಾರದೊಳಗಾಗಿ ಶಾಲೆಗಳ ನೊಂದಣಿಯನ್ನು ಪೂರ್ಣಗೊಳಿಸಿ, ನಿಗದಿತ ನಮೂನೆಯಲ್ಲಿ ಮಹಿತಿಯನ್ನು ಹಾಗೂ ಡಿಡಿ/ಚೆಕ್‌ನ್ನು **ಭಾರತೀಯ ರೆಡ್ ಕ್ರಾಸ್ ಸಂಸ್ಥೆ** ನಂ, **26, ರೆಡ್ ಕ್ರಾಸ್ ಭವನ, ಮೊದಲನೇ ಮಹಡಿ, ರೆಸ್ ಕೋರ್ಸ್‌ರೋಡ್, ಬೆಂಗಳೂರು- 560 001** ಇವರ ವಿಳಾಸಕ್ಕೆ ಕಳುಹಿಸಿ ಅದರ ವರದಿಯನ್ನು ಈ ಕಚೇರಿಗೆ ಸಲ್ಲಿಸಲು ಸೂಚಿಸಿದೆ.

ಉಪನಿರ್ದೇಶಕರು (ಆಡಳಿತ)(ಪ್ರಭಾರಿ)
ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಗಲಕೋಟೆ

**ಅಡಕ:** ಉಲ್ಲೇಖಿತ ಪತ್ರದ ಪ್ರತಿಗಳು

ಗೆ,
ಕ್ಷೇತ್ರ ಶಿಕ್ಷಣಾಧಿಕಾರಿಗಳು,
ಬಾದಾಮಿ/ಬಾಗಲಕೋಟೆ/ಬೀಳಗಿ/ಹುನಗುಂದ/ಜಮಖಂಡಿ/ಮುಧೋಳ

INDIAN RED CROSS SOCIETY ★ KARNATAKA STATE BRANCH ★ Date 1871 21/12/2020